ವಿಜಯ ಕರ್ನಾಟಕ

ಅಂತರ್ ವಿವಿ ಈಜು | ನೀಲ್ ಅತಿ ವೇಗದ ಈಜುಗಾರ

# ಅರವಿಂದ್‌ಗೆ ಅವಳಿ ಚಿನ್ನ

▪ **ವಿಕ ಸುದ್ದಿಲೋಕ** ಬೆಂಗಳೂರು

ಅಮೋಘ ಪ್ರದರ್ಶನ ಮುಂದುವರಿಸಿರುವ ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿವಿಯ ಎಂ. ಅರವಿಂದ್ ಇಲ್ಲಿ ನಡೆಯುತ್ತಿರುವ ಅಖಿಲ ಭಾರತ ಅಂತರ್ ವಿವಿ ಈಜು ಚಾಂಪಿಯನ್‌ಷಿಪ್‌ನಲ್ಲಿ ಬಂಗಾರದ ಬೇಟೆಯನ್ನು ಮುಂದುವರಿಸಿದ್ದು, ಮತ್ತೆರಡು ಚಿನ್ನದ ಪದಕ ಗೆದ್ದುಕೊಂಡಿದ್ದಾರೆ.

ಕನಕಪುರದ ಜೈನ್ ವಿವಿಯ ಕ್ಯಾಂಪಸ್‌ನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ 4ನೇ ದಿನವಾದ ಬುಧವಾರ ಹಲವು ದಾಖಲೆಗಳು ನಿರ್ಮಾಣವಾದವು.

ಗುಜರಾತ್ ವಿವಿಯ ನೀಲ್ ಕಂಟ್ರಕ್ಟರ್ ಪುರುಷರ 50ಮೀ. ಫ್ರೀಸ್ಟೈಲ್ ವಿಭಾಗದಲ್ಲಿ (24.81ಸೆ.) ಮೊದಲಿಗರಾಗಿ ಕ್ರಮಿಸಿ ಅತಿ ವೇಗದ ಈಜು ಪಟು ಎಂಬ ಶ್ರೇಯಕ್ಕೆ ಪಾತ್ರರಾದರು. ಮತ್ತೊಂದೆಡೆ ಪಂಜಾಬ್ ವಿವಿ 4-100ಮೀ. ಫ್ರೀಸ್ಟೈಲ್ ವಿಭಾಗದಲ್ಲಿ 2013ರಲ್ಲಿ ತಾವೇ ನಿರ್ಮಿಸಿದ್ದ ಹಳೆಯ ದಾಖಲೆಯನ್ನು ಅಳಿಸಿ ಹೊಸ ದಾಖಲೆ ನಿರ್ಮಿಸಿತು. ಬೆಂಗಳೂರಿನ ಜೈನ್ ವಿವಿಯ ವಿಕೆಆರ್ ಮೀನಾಕ್ಷಿ ಮಹಿಳೆಯರ 100ಮೀ. ಬ್ಯಾಕ್ ಸ್ಟ್ರೋಕ್ ವಿಭಾಗದಲ್ಲಿ ಮತ್ತೊಂದು ದಾಖಲೆ ಬರೆದರು.

ಪುರಷರ 200ಮೀ. ಮೆಡ್ಲೆ ವಿಭಾಗದಲ್ಲಿ ಬೆಳಗಾವಿಯ ವಿಟಿಯುನ ಎಂ. ಅರವಿಂದ್ (2.11.88ಸೆ.) ಮೊದಲ ಸ್ಥಾನ ಪಡೆದು ಚಿನ್ನ ಗೆದ್ದರೆ,



ನೀಲ್ ಕಂಟ್ರಕ್ಟರ್

ಪುರುಷರ 100ಮೀ. ಬ್ಯಾಕ್‌ಸ್ಟ್ರೋಕ್ ವಿಭಾಗದಲ್ಲಿ ಬೆಳಗಾವಿಯ ವಿಟಿಯುನ ಎಂ.ಅರವಿಂದ್ (59.75ಸೆ.), ಚೆನ್ನೈ ಅಣ್ಣಾ ವಿವಿಯ ಕೆ.ಅಬ್ಬಾಸುದ್ದಿನ್ (1.03.21ಸೆ.) ಮತ್ತು ಬೆಂಗಳೂರು ಜೈನ್ ವಿವಿಯ ರಕ್ಷಿತ್ ಶೆಟ್ಟಿ (1.04.35ಸೆ.) ಕ್ರಮವಾಗಿ ಚಿನ್ನ, ಬೆಳ್ಳಿ ಮತ್ತು ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಮಹಿಳೆಯರ 200ಮೀ. ಮೆಡ್ಲೆ ವಿಭಾಗದಲ್ಲಿ ಜೈನ್‌ವಿವಿಯ ವಿಕೆಆರ್ ಮೀನಾಕ್ಷಿ (2.31.55ಸೆ.), ಪೂರ್ವಾ ಕಿರಣ್ ಶೆಟ್ಟಿ (2.40.40ಸೆ.) ಮೊದಲೆರಡು ಸ್ಥಾನಗಳಿಸಿದರು. 100ಮೀ. ಬ್ಯಾಕ್ ಸ್ಟ್ರೋಕ್ ವಿಭಾಗದಲ್ಲಿ ಮೀನಾಕ್ಷಿ (1.07.95ಸೆ.) ಅಗ್ರ ಸ್ಥಾನಗಳಿಸಿ ಚಿನ್ನ ಗೆದ್ದರೆ, 50ಮೀ. ಫ್ರೀಸ್ಟೈಲ್‌ನಲ್ಲಿ ಬೆಂಗಳೂರಿನ ಟಿ. ಸ್ನೇಹ (28.82ಸೆ.) ಮತ್ತು ಮೀನಾಕ್ಷಿ (29.25ಸೆ.) ಕ್ರಮವಾಗಿ ಮೊದಲ ಎರಡು ಸ್ಥಾನ ಗೆದ್ದರು.